# ಆಹಾ ಸುದ್ದಿ!

★ ಸಸಿತೋಟ

ತಮ್ಮ ಫೋಟೋವನ್ನು ತಾವೇ ತೆಗೆದು ಸಾಮಾಜಿಕ ಜಾಲತಾಣಗಳಲ್ಲಿ ಅಂಟಿಸುವ 'ಸೆಲ್ಫಿ' ಎಷ್ಟು ಜನಪ್ರಿಯವಾಗಿದೆ ಎಂಬುದಕ್ಕೆ ಸಿಡ್ನಿಯ ಮೃಗಾಲಯದಲ್ಲಿರುವ ಈ ಕವೋಲಾವೇ ಉದಾಹರಣೆ. ಅಲ್ಲಿ ಜೋಡಿಸಿರುವ ಕ್ಯಾಮೆರಾವನ್ನು ಈ ಪ್ರಾಣಿ ಸ್ಪರ್ಶಿಸಿದಾಗಲೆಲ್ಲಾ ಚಿತ್ರಗಳು ಕ್ಲಿಕ್ ಆಗುತ್ತವೆ. ಸಮೀಪದಲ್ಲಿರುವ ಪರದೆಯ ಮೇಲೆ ಚಿತ್ರಗಳು ಕಾಣಿಸಿಕೊಳ್ಳುತ್ತವೆ. ಕವೋಲಾವನ್ನು 'ಸೆಲ್ಫಿ' ಎಂದು ತೋರಿಸಲು ಹೊರಟಿರುವ ಮೃಗಾಲಯ ಮಾನವ ಸೆಲ್ಫಿಗಳಿಗೆ ಈ ರೀತಿ ಅವಮಾನ ಮಾಡಬಾರದಿತ್ತು.



ಡೆಹ್ರಾಡೂನ್ ಗ್ರಾಫಿಕ್ ಇರಾ ವಿಶ್ವವಿದ್ಯಾನಿಲಯದ ಪ್ರೊ.ಅರವಿಂದ್ ಮಿಶ್ರಾ ಮಾರ್ಚ್ ಒಂದರಿಂದ ಏಳರವರೆಗೆ 139 ಗಂಟೆ, 42 ನಿಮಿಷ, 56 ಸೆಕೆಂಡ್‌ಗಳ ಕಾಲ ಒಂದೇ ಸಮನೆ ಪಾಠ ಹೇಳಿ ಗಿನ್ನೆಸ್ ದಾಖಲೆ ಸೇರಿದ್ದಾರೆ.  ವಿಷಯ 'ಸೈಂಟಿಫಿಕ್ ಕಂಪ್ಯುಟೇಶನ್'. ಈ ಹಿಂದೆ 2009ರಲ್ಲಿ ಪೋಲೆಂಡ್ ವ್ಯಕ್ತಿಯೊಬ್ಬ 121 ಗಂಟೆ ಕಾಲ ಪಾಠ ಹೇಳಿ ದಾಖಲೆ ಮಾಡಿದ್ದನಂತೆ. ಅವರ ಪಾಠ ಕೇಳಿದವರು ದಾಖಲೆ ಮಾಡಲು ಸಾಧ್ಯವಿಲ್ಲವೇ? ಅಷ್ಟು ಹೊತ್ತು ಕುಳಿತಿರಲು ಯಾರಿಗೂ ಸಮಯ ಇರಲಿಲ್ಲವೇನೋ!

ಐಷಾರಾಮಿ ಕ್ರೇಜ್ ಎಲ್ಲಿಯವರೆಗೆ ಬಂತೆಂದರೆ ಜರ್ಮನಿಯಲ್ಲಿ 24 ಕ್ಯಾರಟ್ ಚಿನ್ನದ ಅಲಂಕಾರ ಇರುವ ಶೌಚಾಲಯ ಪೇಪರ್ ಅನ್ನು ತಯಾರು ಮಾಡಲಾಗಿದೆಯಂತೆ. ಸುರುಳಿಗೆ 246 ಡಾಲರ್ ಬೆಲೆಯಿದ್ದು ಎಲ್ಲಾ ಕಡೆ ಬಿಸಿ ಕೇಕ್‌ನಂತೆ ಬಿಕರಿಯಾಗುತ್ತಿದೆ ಎಂದು ವಿನ್ಯಾಸ ಮಾಡಿದ ಕಂಪೆನಿ ಹೇಳಿಕೊಂಡಿದೆ. ಸುರುಳಿಯನ್ನು ಶೌಚಾಲಯದಲ್ಲಿಡುವುದೋ, ಲಾಕರ್‌ನಲ್ಲಿ ಇಡುವುದೋ ಎಂದು ಗ್ರಾಹಕನಿಗೆ ಗಲಿಬಿಲಿ ಆಗಿರಬಹುದು.



ಮಾಜಿ ಗೆಳತಿಯೋ, ಜಗಳವಾಡಿದ ಸಹೋದ್ಯೋಗಿಯೋ, ಸಾಲ ಪಡೆದ ಸ್ನೇಹಿತನೋ ಎದುರಾಗುವುದನ್ನು ತಪ್ಪಿಸಲು ಯತ್ನಿಸುತ್ತಿದ್ದೀರಾ? ಹಾಗಾದರೆ ಸ್ಪ್ಲಿಟ್ ಎಂಬ ಆ್ಯಂಡ್ರಾಯ್ಡ್ ಆ್ಯಪ್ ನಿಮ್ಮ ನೆರವಿಗೆ ನಿಂತಿದೆ. ಈ ಆ್ಯಪ್‌ನಲ್ಲಿ ಲಾಗಾನ್ ಆಗಿ ಫೇಸ್‌ಬುಕ್‌ನಲ್ಲಿ ನಿಮಗೆ ಬೇಡವಾದರ ಹೆಸರಿನ ಮೇಲೆ ಕ್ಲಿಕ್ ಮಾಡಿ. ಅಂಥವರು ಸ್ವಲ್ಪ ದೂರದಲ್ಲಿದ್ದಾಗಲೇ ನಿಮ್ಮ ಮೊಬೈಲ್ ಸದ್ದು ಮಾಡಿ ನಿಮ್ಮನ್ನು ಎಚ್ಚರಿಸುತ್ತದೆ. ಬೇರೆ ದಾರಿಯಲ್ಲಿ ಹೋಗಿ ಎಂದು ಮಾರ್ಗದ ನಕಾಶೆಯನ್ನೂ ತೋರಿಸುತ್ತದಂತೆ. ನಿಮ್ಮ ಎದುರಾಳಿ ನಿಮ್ಮ ಮೊಬೈಲ್ ಕೆಲಸ ಮಾಡದಂತೆ ಮಾಡುವ ಜಾಮರ್ ಇಟ್ಟುಕೊಂಡರೆ...!

ಚೀನಾದಲ್ಲಿ ನೆಲದಡಿಯ ರೈಲಿನಲ್ಲಿ ನೂರಾರು ಜೋಡಿ ಇತ್ತೀಚೆಗೆ ಮದುವೆಯಾದರು. ಅದರಲ್ಲೇನೂ ವಿಶೇಷವಿಲ್ಲ. ಮದುವೆಯಾದ ತಪ್ಪಿಗೆ ಕಂಡಕಂಡವರಿಗೆ ಆ ರೈಲಿನ ವಿಶೇಷಗಳನ್ನು ಪ್ರಚಾರ ಮಾಡಬೇಕಂತೆ. ಮದುವೆಯ ಸಂಭ್ರಮದಲ್ಲಿ ರೈಲಿನ ವಿಶೇಷಗಳು ಗಮನಕ್ಕೆ ಬರುತ್ತವೆಯೋ ಅಥವಾ ವಧು/ ವರರ ನ್ಯೂನತೆಗಳು ಸೆಳೆಯುತ್ತವೆಯೋ?



ಉತ್ತರ ಕೊರಿಯಾದಲ್ಲಿ ಅಧ್ಯಕ್ಷ 'ಡಿಯರ್ ಲೀಡರ್' ಕಿಮ್ ಜಾಂಗ್ ಉನ್ ಕೇಶ ವಿನ್ಯಾಸವನ್ನೇ ಇಡೀ ದೇಶದ ಪುರುಷರು ಮಾಡಿಸಿಕೊಳ್ಳಬೇಕೆಂದು ಅಲ್ಲಿಯ ಸರ್ಕಾರ ಆದೇಶ ಹೊರಡಿಸಿದೆಯಂತೆ. ಇದಕ್ಕೆ 'ಡಿಯರ್ ಲೀಡರ್' ಕೇಶ ವಿನ್ಯಾಸ ಎಂಬ ಹೆಸರಿದ್ದರೂ ಮೂಲ ಅದಕ್ಕೆ 'ಚೀನಾ ಕಳ್ಳಸಾಗಣೆದಾರ'ರ ಕೇಶವಿನ್ಯಾಸ ಎಂಬ ಹೆಸರಿತ್ತಂತೆ. ಇನ್ನು ಮುಂದೆ ಅಧ್ಯಕ್ಷರ ಉಡುಪೇ ಎಲ್ಲರಿಗೂ ಸಮವಸ್ತ್ರ ಎಂಬ ಆದೇಶ ಬಂದರೂ ಅಚ್ಚರಿ ಪಡಬೇಕಾಗಿಲ್ಲ.

